# ಕನ್ನಡ ಪೋಸ್ಟ್

KANNADA POST

ಸಂಪಾದಕ : ಮಂಜು ಬನವಾಸೆ

ಇದು ಸುದ್ದಿ ವಿಳಾಸ

ಕನ್ನಡ ದಿನಪತ್ರಿಕೆ


ಹಾಸನ | E-mail : kannadapostnews@gmail.com | f / ಕನ್ನಡ post | Price: ₹1

Vol.No.02 | Issue. 200 | Pages. 2 | Date: 19-07-2026, SUNDAY | RNI NO: KARKAN/2024/89601 | Kannada Daily

ಸಂಪುಟ : 02 - ಸಂಚಿಕೆ : 200 - ಪುಟಗಳು : 2 | 19-07-2026 ಭಾನುವಾರ | Ph: 8762954248 | ದರ : ₹1


## ಸುದೀರ್ಘ 72 ವರ್ಷಗಳ ಸಪ್ತಪದಿ ಪಯಣಕ್ಕೆ ತೆರೆ

# ದೇವೇಗೌಡರ ಬದುಕಿನ 'ಮಹಾಲಕ್ಷ್ಮಿ' ಚೆನ್ನಮ್ಮ ಇನ್ನಿಲ್ಲ




ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಬೆಂಗಳೂರು: ರಾಜಕೀಯದ ಚದುರಂಗದಾಟದಲ್ಲಿ ಏಳು-ಬೀಳುಗಳನ್ನು ಕಂಡು, ದೇಶದ ಅತ್ಯುನ್ನತ ಪ್ರಧಾನಿ ಹುದ್ದೆಯವರೆಗೂ ಏರಿದ ಹೆಚ್.ಡಿ. ದೇವೇಗೌಡರ ಬದುಕಿನ ಹಿಂದಿದ್ದ ಶಕ್ತಿ, ಅವರ ಯಶಸ್ಸಿನ ಮೌನ ಸೂತ್ರಧಾರ ಚೆನ್ನಮ್ಮ ದೇವೇಗೌಡ ಇನ್ನಿಲ್ಲ. ಕೇವಲ ಒಬ್ಬ ನಾಯಕನ ಪತ್ನಿಯಾಗಿ ಮಾತ್ರವಲ್ಲದೆ, ಒಂದು ಬೃಹತ್ ರಾಜಕೀಯ ಕುಟುಂಬವನ್ನು ಒಗ್ಗಟ್ಟಿನಿಂದ ಮುನ್ನಡೆಸಿದ ಮಾತೃಶ್ರೀಯ ನಿರ್ಗಮನದೊಂದಿಗೆ ದೇವೇಗೌಡರ 72 ವರ್ಷಗಳ ಸುದೀರ್ಘ, ಅನ್ಯೋನ್ಯ ದಾಂಪತ್ಯದ ಪಯಣಕ್ಕೆ ಇಂದು ತೆರೆ ಬಿದ್ದಿದೆ.

### ಅಧಿಕಾರದ ಆಸೆ ಇಲ್ಲದ ಸರಳ ಜೀವಿ

ಹೆಚ್.ಡಿ. ದೇವೇಗೌಡರು ಶಾಸಕರಾಗಿ, ಮಂತ್ರಿಯಾಗಿ, ರಾಜ್ಯದ ಮುಖ್ಯಮಂತ್ರಿಯಾಗಿ ಕೊನೆಗೆ ದೇಶದ ಪ್ರಧಾನ ಮಂತ್ರಿಯಾದಾಗಲೂ ಚೆನ್ನಮ್ಮ ಅವರು ಎಂದಿಗೂ ಅಧಿಕಾರದ ಪ್ರಭಾವಲಯಕ್ಕೆ ಹೋದವರಲ್ಲ. ದೆಹಲಿಯ ಪ್ರಧಾನಿ ನಿವಾಸದಲ್ಲಿದ್ದಾಗಲೂ ಅವರ ಸರಳತೆ ಮತ್ತು ಧಾರ್ಮಿಕ ಶ್ರದ್ಧೆ ಬದಲಾಗಲಿಲ್ಲ. ರಾಜಕೀಯದ ಯಾವುದೇ ಚಟುವಟಿಕೆಗಳಲ್ಲಿ ಹಸ್ತಕ್ಷೇಪ ಮಾಡದ ಅವರು, ಗೌಡರಿಗೆ ಮಾನಸಿಕ ನೆಮ್ಮದಿ ನೀಡುವ ತಾಣವಾಗಿದ್ದರು. ದೇಶದ ಪ್ರಧಾನಿಯಾಗಿದ್ದ ಪತಿಗೆ ತಾವೇ ಸ್ವತಃ ಅಡುಗೆ ಮಾಡಿ



### 1954ರ ಮೇ 25ರಂದು ಬೆಸೆದ ಬಾಂಧವ್ಯ

1954ರ ಮೇ 25 ರಂದು ಹರದನಹಳ್ಳಿಯ ಈ ಯುವ ಜೋಡಿ ಸಪ್ತಪದಿ ತುಳಿದಾಗ ದೇವೇಗೌಡರು ಇನ್ನು ರಾಜಕೀಯಕ್ಕೆ ಅಂಬೆಗಾಲಿಡುತ್ತಿದ್ದ ಕಾಲ. ಹಾಸನದ ಹಳ್ಳಿಯೊಂದರ ಕೃಷಿಕ ಕುಟುಂಬದಿಂದ ಬಂದ ಚೆನ್ನಮ್ಮ ಅವರು ದೇವೇಗೌಡರ ಬದುಕಿಗೆ ಹೆಜ್ಜೆಯಿಟ್ಟ ಮೇಲೆಯೇ ಗೌಡರ ರಾಜಕೀಯ ಜೀವನಕ್ಕೆ ಹೊಸ ಕಳೆ ಬಂದಿತು ಎಂಬುದು ಕುಟುಂಬಸ್ಥರ ನಂಬಿಕೆ. ಅಂದಿನಿಂದ ಇಂದಿನವರೆಗೂ, ಅಂದರೆ ಸುಮಾರು ಏಳು ದಶಕಗಳಿಗೂ ಹೆಚ್ಚು ಕಾಲ ಈ ದಂಪತಿಗಳು ಸುಖ-ದುಃಖ, ಕಷ್ಟ-ನಷ್ಟಗಳನ್ನು ಸಮಾನವಾಗಿ ಹಂಚಿಕೊಂಡು ಆದರ್ಶ ದಾಂಪತ್ಯಕ್ಕೆ ಸಾಕ್ಷಿಯಾಗಿದ್ದರು.





ಬಡಿಸುತ್ತಿದ್ದ ಅವರ ನಡೆ ಇಡೀ ದೇಶದ ಗಮನ ಸೆಳೆದಿತ್ತು.

### ಒಂದು ಹೆಮ್ಮರವನ್ನು ಸಲಹಿದ ತಾಯಿ

ನಾಲ್ಕು ಗಂಡು ಮಕ್ಕಳು ಹಾಗೂ ಇಬ್ಬರು ಹೆಣ್ಣು ಮಕ್ಕಳನ್ನು ಶಿಸ್ತಿನಿಂದ ಬೆಳೆಸಿ, ಇಂದು ಇಡೀ ಕುಟುಂಬವೇ ರಾಜ್ಯ ರಾಜಕೀಯದಲ್ಲಿ ಭದ್ರವಾಗಿ ನೆಲೆಯೂರಲು ಚೆನ್ನಮ್ಮ ಅವರ ಒಳಗಣ್ಣಿನ ಮಾರ್ಗದರ್ಶನವೇ ಕಾರಣ. ರಾಜಕೀಯ ಒತ್ತಡಗಳ ನಡುವೆ ದೇವೇಗೌಡರು ಮನೆ ಕಡೆ ಗಮನ ಹರಿಸಲು ಸಾಧ್ಯವಾಗದ ದಿನಗಳಲ್ಲಿ ಇಡೀ ಸಂಸಾರದ ಜವಾಬ್ದಾರಿಯನ್ನು ಹೊತ್ತು ಹೆಮ್ಮರವನ್ನು ಸಲಹಿದ ಕೀರ್ತಿ ಚೆನ್ನಮ್ಮ ಅವರಿಗೆ ಸಲ್ಲುತ್ತದೆ.

ಇಂದು ಚೆನ್ನಮ್ಮ ಅವರ ಅಗಲಿಕೆಯಿಂದ ಇಡೀ ದೊಡ್ಡಗೌಡರ ಕುಟುಂಬ ಅನಾಥ ಪ್ರಜ್ಞೆ ಎದುರಿಸುತ್ತಿದ್ದರೆ, ಮುಪ್ಪಿನ ವಯಸ್ಸಿನಲ್ಲಿ ಹೆಗಲಿಗೆ ಹೆಗಲಾಗಿ ನಿಂತಿದ್ದ ಪ್ರೀತಿಯ ಅರ್ಧಾಂಗಿಯನ್ನು ಕಳೆದುಕೊಂಡು ಮಾಜಿ ಪ್ರಧಾನಿ ಹೆಚ್.ಡಿ. ದೇವೇಗೌಡರು ಏಕಾಂಗಿಯಾಗಿದ್ದಾರೆ. ಈ ಅನ್ಯೋನ್ಯ ದಾಂಪತ್ಯದ ಅಗಲಿಕೆ ಕೇವಲ ಒಂದು ಕುಟುಂಬದ ನಷ್ಟವಲ್ಲ, ಆದರ್ಶ ದಾಂಪತ್ಯಕ್ಕೆ ಸಾಕ್ಷಿಯಾಗಿದ್ದ ಮಹಾ ಕೊಂಡಿಯೊಂದು ಕಳಚಿದಂತಾಗಿದೆ.



### ದೇವಸ್ಥಾನಗಳ ಪ್ರದಕ್ಷಿಣೆ ಮತ್ತು ಹರಕೆ

ದೇವೇಗೌಡರಿಗೆ ರಾಜಕೀಯವಾಗಿ ಯಾವುದೇ ಸಂಕಷ್ಟ ಎದುರಾದರೂ ಚೆನ್ನಮ್ಮ ಅವರು ದೇವರ ಮೊರೆ ಹೋಗುತ್ತಿದ್ದರು. ಪತಿಯ ಆರೋಗ್ಯ, ಆಯುಷ್ಯ ಹಾಗೂ ಯಶಸ್ಸಿಗಾಗಿ ಅವರು ದೇಶದ ನೂರಾರು ಪುಣ್ಯಕ್ಷೇತ್ರಗಳಿಗೆ ಭೇಟಿ ನೀಡಿ ವಿಶೇಷ ಪೂಜೆ ಸಲ್ಲಿಸುತ್ತಿದ್ದರು. ದೇವೇಗೌಡರು ಕೂಡ ಪತ್ನಿಯ ಧಾರ್ಮಿಕ ನಂಬಿಕೆಗೆ ಸದಾ ಗೌರವ ನೀಡುತ್ತಾ, ಎಲ್ಲೇ ಹೋದರೂ ಅವರ ಕೈ ಹಿಡಿದು ಜೊತೆಯಾಗಿ ಸಾಗುತ್ತಿದ್ದರು. ಇತ್ತೀಚಿನ ವರ್ಷಗಳಲ್ಲಿ ವಯೋಸಹಜ ಕಾಯಿಲೆಗಳಿಂದ ಇಬ್ಬರೂ ಬಳಲುತ್ತಿದ್ದಾಗಲೂ ಒಬ್ಬರಿಗೊಬ್ಬರು ಧೈರ್ಯ ತುಂಬುತ್ತಾ ಬದುಕಿನ ದಾರಿಯಲ್ಲಿ ಸಾಗಿದ್ದರು.



# ಆ್ಯಸಿಡ್ ದಾಳಿಯ ಗಾಯಗಳನ್ನೇ ಸಹನೆಯ ಮೆಟ್ಟಿಲಾಗಿಸಿಕೊಂಡಿದ್ದ ಚೆನ್ನಮ್ಮ

## ತಾಯಿ ಪ್ರಾಣ ಉಳಿಸಲು ಮಹಾ ದೈವಭಕ್ತನಾದ ರೇವಣ್ಣ | ಗಟ್ಟಿಗಿತ್ತಿಯ ಯಶೋಗಾಥೆ

ಹಾಸನ: ಮಾಜಿ ಪ್ರಧಾನಿ ಎಚ್.ಡಿ. ದೇವೇಗೌಡರ ಬೆನ್ನೆಲುಬಾಗಿ ನಿಂತಿದ್ದ ಅವರ ಧರ್ಮಪತ್ನಿ ಚನ್ನಮ್ಮ (85) ಅವರು ಶನಿವಾರ ಸಂಜೆ ಮಣಿಪಾಲ್ ಆಸ್ಪತ್ರೆಯಲ್ಲಿ ಕೊನೆಯುಸಿರೆಳೆದಿದ್ದಾರೆ. ಕಳೆದ ಕೆಲವು ದಿನಗಳಿಂದ ಉಸಿರಾಟದ ಸಮಸ್ಯೆ ಮತ್ತು ವಯೋಸಹಜ ಕಾಯಿಲೆಯಿಂದ ಬಳಲುತ್ತಿದ್ದ ಅವರು, ದೀರ್ಘಕಾಲದ ಹೋರಾಟದ ನಂತರ ಇಹಲೋಕ ತ್ಯಜಿಸಿದ್ದಾರೆ. ಕೇವಲ ಹಿರಿಯ ರಾಜಕೀಯ ನಾಯಕರೊಬ್ಬರ ಪತ್ನಿಯಾಗಿ ಮಾತ್ರವಲ್ಲದೆ, ಭೀಕರ ನೋವನ್ನು ಅಸಾಧಾರಣ ಧೈರ್ಯದಿಂದ ಎದುರಿಸಿದ ಅಪ್ರತಿಮ ಮಹಿಳೆಯಾಗಿ ಚನ್ನಮ್ಮ ಅವರು ಸದಾ ನೆನಪಿನಲ್ಲಿ ಉಳಿಯಲಿದ್ದಾರೆ.

### ಆ ಕರಾಳ ದಿನ ಮತ್ತು ಆ್ಯಸಿಡ್ ದಾಳಿಯ ಭೀಕರತೆ

2001ರ ಫೆಬ್ರವರಿ 21, ದೇವೇಗೌಡರ ಕುಟುಂಬದ ಪಾಲಿಗೆ ಮರೆಯಲಾಗದ ಕರಾಳ ದಿನ. ಹರದನಹಳ್ಳಿಯ ಈಶ್ವರ ದೇವಸ್ಥಾನದಲ್ಲಿ ದೇವರ ದರ್ಶನಕ್ಕೆ ತೆರಳಿದ್ದಾಗ, ದೇವೇಗೌಡರ ಮೇಲಿನ ಹಗೆತನದ ಹಿನ್ನೆಲೆಯಲ್ಲಿ ಚನ್ನಮ್ಮ ಹಾಗೂ ಅವರ ಸೊಸೆ ಭವಾನಿ ರೇವಣ್ಣ ಅವರ ಮೇಲೆ ಆ್ಯಸಿಡ್ ದಾಳಿ ನಡೆದಿತ್ತು.

ಪೂಜೆಯ ನೆಪದಲ್ಲಿ ಬಂದ ದೇವೇಗೌಡರ ಸಹೋದರನ ಪುತ್ರನೇ ಈ ಕೃತ್ಯವೆಸಗಿದ್ದ. ದೇವರ ಸನ್ನಿಧಿಯಲ್ಲಿಯೇ ನಡೆದ ಈ ಭೀಕರ ಘಟನೆಯಲ್ಲಿ ಚನ್ನಮ್ಮ ಅವರ ಮುಖ ಮತ್ತು ತಲೆಗೆ ಗಂಭೀರ ಗಾಯಗಳಾಗಿದ್ದವು. ಆ ದಿನ ಅವರು ಎದುರಿಸಿದ ದೈಹಿಕ ಯಾತನೆ ಮತ್ತು ಆಘಾತ ಊಹೆಗೂ ನಿಲುಕದ್ದು.

### ಗಾಯಗಳೊಂದಿಗೆಯೇ ಬದುಕಿದ ಸಹನಾಮಯಿ

ಆ್ಯಸಿಡ್ ದಾಳಿ ಕೇವಲ ದೈಹಿಕ ಗಾಯಗಳನ್ನಷ್ಟೇ ನೀಡುವುದಿಲ್ಲ; ಅದು ಜೀವಮಾನವಿಡೀ ಕಾಡುವ ಮಾನಸಿಕ ಯಾತನೆಯನ್ನೂ ನೀಡುತ್ತದೆ. ಆದರೆ, ಎರಡು ಬಾರಿ ಸಾವಿನ ದವಡೆಯಿಂದ ಪಾರಾಗಿ ಬಂದಿದ್ದ ಚನ್ನಮ್ಮ ಅವರು, ಆ್ಯಸಿಡ್ ದಾಳಿಯ ಶಾಶ್ವತ ಕಲೆಗಳನ್ನು ತಮ್ಮ ಮೌನ ಮತ್ತು ಸಹನೆಯಿಂದಲೇ ಮರೆಮಾಚಿದರು.



ಇಷ್ಟೂ ದೀರ್ಘ ವರ್ಷಗಳ ಕಾಲ ಆ ಸುಟ್ಟ ಕಲೆಗಳನ್ನು ಅರಗಿಸಿಕೊಂಡು, ಅಪಾರ ನೋವಿನೊಂದಿಗೇ ಬದುಕಿದ್ದರೂ ಅವರು ಅದನ್ನೊಂದು ದೌರ್ಬಲ್ಯವನ್ನಾಗಿ ಮಾಡಿಕೊಳ್ಳಲಿಲ್ಲ. ತಮ್ಮ ನೋವನ್ನು ತಾವೇ ನುಂಗಿ, ಇಡೀ ಕುಟುಂಬವನ್ನು ಒಂದುಗೂಡಿಸುವ ಮತ್ತು ದೇವೇಗೌಡರ ಸುದೀರ್ಘ ರಾಜಕೀಯ ಜೀವನಕ್ಕೆ ನೆರಳಾಗಿ ನಿಲ್ಲುವ ಕಾಯಕವನ್ನು ಅವರು ನಿರಂತರವಾಗಿ ಮುಂದುವರಿಸಿದರು. ಸಾರ್ವಜನಿಕವಾಗಿ ಆ ಕಲೆಗಳೊಂದಿಗೆ ಕಾಣಿಸಿಕೊಳ್ಳುವಾಗ ಎದುರಾಗುತ್ತಿದ್ದ ದೈಹಿಕ ನೋವನ್ನಾಗಲಿ, ಮಾನಸಿಕ ಮುಜುಗರವನ್ನಾಗಲಿ ಅವರು ಒಮ್ಮೆಯೂ ತೋರ್ಪಡಿಸಿಕೊಳ್ಳಲಿಲ್ಲ.

ಪತಿಯ ರಾಜಕೀಯದ ಏಳು-ಬೀಳುಗಳು, ಮನೆಯೊಳಗಿನ ರಾಜಕೀಯ ಮಹತ್ವಾಕಾಂಕ್ಷಿಗಳ ಶೀತಲ ಕೋಪ ಸಾಧನೆ, ದೈಹಿಕವಾಗಿ ಎದುರಿಸಿದ ಆ್ಯಸಿಡ್ ದಾಳಿಯ ಘೋರ ಯಾತನೆಇವೆಲ್ಲವನ್ನೂ ಅವರು ಅತ್ಯಂತ ಮೌನವಾಗಿ ಸಹಿಸಿಕೊಂಡರು. ಆ ಮುಖದ ಮೇಲಿದ್ದ ಕಲೆಗಳು ಕೇವಲ ಗಾಯಗಳಾಗಿರಲಿಲ್ಲ; ಬದಲಿಗೆ ಅವರ ಸಹನೆ, ಕ್ಷಮಾಶೀಲತೆ ಮತ್ತು ಎಂತಹದ್ದೇ ಸಂಕಷ್ಟವನ್ನೂ ಎದುರಿಸಬಲ್ಲ ಅಪರೂಪದ ಸ್ತ್ರೀಶಕ್ತಿಯ ಸಂಕೇತವಾಗಿದ್ದವು.

### ಅಂದು ಏನಾಗಿತ್ತು?

**ದಿನಾಂಕ ಮತ್ತು ಸ್ಥಳ:** ಫೆಬ್ರವರಿ 21, 2001 ರಂದು ಜಿಲ್ಲೆಯ ಹರದನಹಳ್ಳಿಯ ಈಶ್ವರ ದೇವಸ್ಥಾನದಲ್ಲಿ ಈ ದುರ್ಘಟನೆ ನಡೆಯಿತು.

**ಸಂತ್ರಸ್ತರು:** ಆ್ಯಸಿಡ್ ದಾಳಿಯಲ್ಲಿ ಎಚ್.ಡಿ. ದೇವೇಗೌಡರ ಪತ್ನಿ ಚನ್ನಮ್ಮ ದೇವೇಗೌಡ ಹಾಗೂ ಅವರ ಸೊಸೆ ಭವಾನಿ ರೇವಣ್ಣ ಅವರು ಗಾಯಗೊಂಡಿದ್ದರು.

**ಆರೋಪಿ:** ದೇವೇಗೌಡರ ಸಹೋದರ ಬಸವೇಗೌಡ ಅವರ ಪುತ್ರ ಲೋಕೇಶ್ ಈ ಕೃತ್ಯ ಎಸಗಿದ್ದ ಪ್ರಮುಖ ಆರೋಪಿಯಾಗಿದ್ದನು.

**ದಾಳಿಗೆ ಕಾರಣ:** ಈ ಭೀಕರ ದಾಳಿಗೆ ಮುಖ್ಯವಾಗಿ ಎರಡು ಕುಟುಂಬಗಳ ನಡುವಿನ ಕೌಟುಂಬಿಕ ಕಲಹ ಹಾಗೂ ಆಸ್ತಿ ವಿವಾದವೇ ಕಾರಣ ಎಂದು ಪೊಲೀಸ್ ತನಿಖೆಯಿಂದ ತಿಳಿದುಬಂದಿತ್ತು.

### ನ್ಯಾಯಾಲಯದ ತೀರ್ಪು

- ಹೊಳೆನರಸೀಪುರ ಪೊಲೀಸ್ ಠಾಣೆಯಲ್ಲಿ ಈ ಪ್ರಕರಣ ದಾಖಲಾಗಿತ್ತು. ನಂತರ ಈ ಪ್ರಕರಣದ ವಿಚಾರಣೆ ನಡೆಸಿದ ನ್ಯಾಯಾಲಯವು ಈ ಕೆಳಗಿನಂತೆ ತೀರ್ಪು ನೀಡಿತು:
- ಶಿಕ್ಷೆಯ ಪ್ರಮಾಣ: ಸೆಪ್ಟೆಂಬರ್ 30, 2002 ರಂದು ಹಾಸನದ ಹೆಚ್ಚುವರಿ ಸೆಷನ್ಸ್ ನ್ಯಾಯಾಲಯದ ನ್ಯಾಯಾಧೀಶರಾದ ಎ.ಎಲ್. ಪೂಜಾರ್ ಅವರು ಪ್ರಮುಖ ಆರೋಪಿ ಲೋಕೇಶ್‌ಗೆ 8 ವರ್ಷಗಳ ಜೈಲು ಶಿಕ್ಷೆ ಹಾಗೂ 11,500 ರೂ. ದಂಡ ವಿಧಿಸಿದರು.
- ಖುಲಾಸೆ: ಇದೇ ಪ್ರಕರಣದಲ್ಲಿ ಸಹ-ಆರೋಪಿಯಾಗಿದ್ದ ಲೋಕೇಶ್‌ನ ಸಹೋದರ ಜ್ಞಾನೇಶ್‌ನನ್ನು ಸಾಕ್ಷ್ಯಾಧಾರಗಳ ಕೊರತೆಯ ಹಿನ್ನೆಲೆಯಲ್ಲಿ ನ್ಯಾಯಾಲಯವು ಖುಲಾಸೆಗೊಳಿಸಿತು.



### ಸಾವು-ಬದುಕಿನ ನಡುವೆ ದೀರ್ಘ ಹೋರಾಟ

ಕೂರುವುದಕ್ಕೂ, ನಿಲ್ಲುವುದಕ್ಕೂ ಗಳಿಗೆ, ಶಾಸ್ತ್ರ ನೋಡುವ ಮಾಜಿ ಸಚಿವ ಎಚ್.ಡಿ.ರೇವಣ್ಣ ಅವರ ಧಾರ್ಮಿಕ ನಂಬಿಕೆಗಳು ಇಷ್ಟೊಂದು ದೃಢವಾಗಲು ಚನ್ನಮ್ಮ ಅವರ ಮೇಲಿ ಆ್ಯಸಿಡ್ ದಾಳಿ ಪ್ರಕರಣವೂ ಪ್ರಮುಖ ಕಾರಣ ಎನ್ನುತ್ತಾರೆ ಅವರ ಕುಟುಂಬದ ನಿಕಟವರ್ತಿಗಳು.

ಚನ್ನಮ್ಮ ಅವರು ಗಂಭೀರ ಆ್ಯಸಿಡ್ ದಾಳಿಯಲ್ಲಿ ತೀವ್ರವಾಗಿ ಗಾಯಗೊಂಡು ಆಸ್ಪತ್ರೆಯಲ್ಲಿ ಸಾವು-ಬದುಕಿನ ನಡುವೆ ದೀರ್ಘ ಹೋರಾಟ ನಡೆಸುತ್ತಾ ಮಲಗಿದ್ದರು.

ಅವರ ತಲೆ ಮೇಲೆ ಸುರಿದ ಆ್ಯಸಿಡ್ ಅವರ ತಲೆ ಹಾಗೂ ಮುಖದ ಒಂದು ಭಾಗವನ್ನೇ ಸುಟ್ಟು ಹಾಕಿತ್ತು. ಆಗ ಜ್ಯೋತಿಷ್ಯರ ಮೊರೆ ಹೋದ ಎಚ್.ಡಿ.ರೇವಣ್ಣ, ಪ್ರತಿದಿನ ಬೆಳಗಿನ ಜಾವಕ್ಕೆ ಎದ್ದು ಜ್ಯೋತಿಷ್ಯರು ಸೂಚಿಸಿದ ದೇವಾಲಯಗಳಿಗೆ ತೆರಳಿ ಗಂಟೆಗಟ್ಟಲೆ ಕುಳಿತು ಪೂಜೆ ಸಲ್ಲಿಸುತ್ತಿದ್ದರು. ನಂತರ ಆಸ್ಪತ್ರೆಗೆ ಬಂದು ಚಿಕಿತ್ಸೆ ಪಡೆಯುತ್ತಾ ಪ್ರಜ್ಞಾಶೂನ್ಯರಾಗಿ ಮಲಗಿರುತ್ತಿದ್ದ ತಾಯಿಯ ಹಣೆಗೆ ಕುಂಕುಮ ಇರಿಸಿ ಹಾಸಿಗೆ ಪಕ್ಕವೇ ಕುಳಿತು ದೇವರ ಜಪ ಮಾಡುತ್ತಿದ್ದರು. ದೀರ್ಘಕಾಲೀನ ಚಿಕಿತ್ಸೆ, ಶಸ್ತ್ರಚಿಕಿತ್ಸೆಗಳ ನಂತರ ಸಾವನ್ನು ಗೆದ್ದು ಬಂದ ಚನ್ನಮ್ಮ ಅವರು ಮಾಮೂಲಿ ಜೀವನಕ್ಕೆ ಮರಳಿದರು.

ಈ ಚಮತ್ಕಾರಕ್ಕೆ ದೇವರ ಅನುಗ್ರಹವೇ ಕಾರಣ ಎಂದು ದೃಢವಾಗಿ ನಂಬಿದ ಪುತ್ರ ರೇವಣ್ಣ, ಮಹಾನ್ ದೈವ ಭಕ್ತರಾಗಿ ಬದಲಾದರು. ಜ್ಯೋತಿಷ್ಯ, ಪೂಜೆ, ಪುನಸ್ಕಾರಗಳ ಮೇಲೆ ಬಲವಾದ ನಂಬಿಕೆ ಬೆಳಸಿಕೊಂಡರು ಎನ್ನುತ್ತಾರೆ ಅವರ ಸಮೀಪವರ್ತಿಗಳು.

# ಜೋಳಕ್ಕೆ ಬಿಳಿ ಸುಳಿ ರೋಗ ಸಂಕಷ್ಟದಲ್ಲಿ ಅನ್ನದಾತರು

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಬೇಲೂರು: ತಾಲೂಕಿನ ಹಳೇಬೀಡು ಹೋಬಳಿ ವ್ಯಾಪ್ತಿಯಲ್ಲಿ ಜೋಳದ ಬೆಳೆಗೆ ಬಿಳಿ ಸುಳಿ ರೋಗ ತಗುಲಿದ್ದು, ರೈತರ ಬದುಕು ತೀವ್ರ ಸಂಕಷ್ಟಕ್ಕೆ ಸಿಲುಕಿದೆ. ಹಾನಿಗೊಳಗಾದ ಜಮೀನುಗಳಿಗೆ ಬೇಲೂರು ವಿಧಾನಸಭಾ ಕ್ಷೇತ್ರದ ಶಾಸಕ ಹೆಚ್.ಕೆ. ಸುರೇಶ್ ಸ್ಥಳ ಪರಿಶೀಲಿಸಿದರು.



ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕ್ಷೇತ್ರದಲ್ಲಿ ಈಗಾಗಲೇ ಭೀಕರ ಬರಗಾಲದ ಪರಿಸ್ಥಿತಿ ಇದೆ. ಇಂತಹ ಕಠಿಣ ಸನ್ನಿವೇಶದಲ್ಲೂ ರೈತರು ಲಭ್ಯವಿರುವ ಅಲ್ಪಸ್ವಲ್ಪ ನೀರಾವರಿ ಸೌಲಭ್ಯವನ್ನು ಬಳಸಿಕೊಂಡು ಜೋಳದ ಬೆಳೆಯನ್ನು ಸಾಕಿ ಬೆಳೆಸಿದ್ದರು. ಆದರೆ, ದುರದೃಷ್ಟವಶಾತ್ ಈಗ ಇಡೀ ಬೆಳೆಗೆ ಬಿಳಿ ಸುಳಿ ರೋಗ ಆವರಿಸಿದೆ. ರೋಗದ ತೀವ್ರತೆ ಎಷ್ಟಿದೆಯೆಂದರೆ ಜೋಳದ ದಂಟನ್ನು ದನಕರು ಸಹ ತಿನ್ನಲು ಸಾಧ್ಯವಾಗದಷ್ಟು ಸಂಪೂರ್ಣವಾಗಿ ಬೆಳೆ ಹಾಳಾಗಿದೆ.ಇತ್ತ ದನಕರುಗಳಿಗೂ ಬಳಕೆಯಾಗುತ್ತಿಲ್ಲ. ಅತ್ತ ಫಸಲೂ ಕೈಗೆ ಸಿಗುತ್ತಿಲ್ಲ. ಇದು ರೈತರ ಜೀವನವನ್ನು ಸಂಪೂರ್ಣವಾಗಿ ಅಸ್ತವ್ಯಸ್ತಗೊಳಿಸಿದೆ.

ಬೇಲೂರು ವಿಧಾನಸಭಾ ಕ್ಷೇತ್ರದಲ್ಲಿ ಸುಮಾರು 10,000 ಹೆಕ್ಟೇರ್ ಪ್ರದೇಶದಲ್ಲಿ ಜೋಳದ ಬೆಳೆ ಈ ರೋಗದಿಂದಾಗಿ ನಾಶವಾಗಿದೆ. ಸರ್ಕಾರವು ಕೂಡಲೇ ಈ ವಿಷಯಕ್ಕೆ ಸ್ಪಂದಿಸಿ, ಬಾಧಿತ ಪ್ರದೇಶಗಳಿಗೆ ಕೃಷಿ ಅಧಿಕಾರಿಗಳನ್ನು ಕಳುಹಿಸಬೇಕು. ರೋಗ ತಗುಲಿರುವ ಜೋಳದ ಬೆಳೆ ಹಾನಿಯನ್ನು ಅಧಿಕಾರಿಗಳು ಸ್ಥಳದಲ್ಲೇ ಸಮಗ್ರವಾಗಿ ಪರಿಶೀಲಿಸಬೇಕು. ಮಾನ್ಯ ಮುಖ್ಯಮಂತ್ರಿಗಳು ತಕ್ಷಣವೇ ಈ ವಿಷಯದಲ್ಲಿ ಮಧ್ಯಪ್ರವೇಶಿಸಿ, ಹಾನಿಗೊಳಗಾದ ರೈತರಿಗೆ ಸೂಕ್ತ ಆರ್ಥಿಕ ನೆರವು ಘೋಷಿಸಬೇಕು ಎಂದು ಆಗ್ರಹಿಸಿದರು.

ಬೆಳೆ ಬೆಳೆದು ಜೀವನ ಮಾಡುವುದೊಂದೇ ರೈತರಿಗಿರುವ ದಾರಿ. ಆದ್ದರಿಂದ ರೈತರ ಹಿತದೃಷ್ಟಿಯಿಂದ ಸರ್ಕಾರ ತಕ್ಷಣವೇ ಪ್ರತಿ ಹೆಕ್ಟೇರ್‌ಗೆ 5 ಲಕ್ಷ ರೂ. ಪರಿಹಾರ ಬಿಡುಗಡೆ ಮಾಡಬೇಕು ಎಂದು ಒತ್ತಾಯಿಸಿದರು.

ಕೃಷಿ ಇಲಾಖೆ ಅಧಿಕಾರಿ ಕಾಂತರಾಜು, ರೈತ ಮುಖಂಡರು ಹಾಗೂ ಹಳೇಬೀಡು ಹೋಬಳಿ ಕೃಷಿ ಇಲಾಖೆ ಅಧಿಕಾರಿಗಳು ಹಾಜರಿದ್ದರು.

# ಎನ್‌ಎಂಎಂಎಸ್ ವಿದ್ಯಾರ್ಥಿ ವೇತನಕ್ಕೆ ಆಯ್ಕೆ: ಸನ್ಮಾನ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಬೇಲೂರು : ತಾಲೂಕಿನ ಗುಬ್ಬಲಗೋಡು ಸರ್ಕಾರಿ ಪ್ರೌಢಶಾಲೆಯಲ್ಲಿ ಪೋಷಕರ ಸಭೆ ಹಾಗೂ 2025-26ನೇ ಸಾಲಿನ ಎನ್ ಎಂಎಂಎಸ್ ವಿದ್ಯಾರ್ಥಿ ವೇತನಕ್ಕೆ ಆಯ್ಕೆಯಾದ ವಿದ್ಯಾರ್ಥಿಗಳ ಸನ್ಮಾನ ಸಮಾರಂಭ ನೆರವೇರಿತು.

ತಾಲೂಕಿಗೆ ಪ್ರಥಮ ಸ್ಥಾನ ಪಡೆದು ಎನ್‌ಎಂಎಂಎಸ್ ವಿದ್ಯಾರ್ಥಿ ವೇತನಕ್ಕೆ ಆಯ್ಕೆಯಾದ ಪ್ರತೀಕ್ಷಾ, ತೃತೀಯ ಸ್ಥಾನ ಪಡೆದ ಸಿ.ಆರ್. ಚೇತನ್ ಅವರನ್ನು ಶಾಲೆಯ ವತಿಯಿಂದ ಆತ್ಮೀಯವಾಗಿ ಅಭಿನಂದಿಸಲಾಯಿತು. ಇದೇ ವೇಳೆ ಸಾಧಕ ವಿದ್ಯಾರ್ಥಿಗಳಿಗೆ ಅಭಿನಂದನಾ ಪತ್ರಗಳನ್ನು ವಿತರಿಸಿ ಗೌರವಿಸಲಾಯಿತು.

ಎನ್‌ಎಂಎಂಎಸ್ ನೋಡಲ್ ಶಿಕ್ಷಕ ಹೆಚ್.ಪಿ. ಗಿರೀಶ್ ಮಾತನಾಡಿ,



ವಿದ್ಯಾರ್ಥಿಗಳ ಈ ಸಾಧನೆ ಶಾಲೆಗೆ ಹೆಮ್ಮೆಯ ಸಂಗತಿಯಾಗಿದೆ.

ವಿದ್ಯಾರ್ಥಿಗಳು ಸ್ಪಷ್ಟ ಗುರಿಯೊಂದಿಗೆ ನಿರಂತರ ಅಭ್ಯಾಸ ಮಾಡಿದರೆ ಯಾವುದೇ ಸಾಧನೆಯೂ ಅಸಾಧ್ಯವಲ್ಲ.

ಎನ್‌ಎಂಎಂಎಸ್ ತರಬೇತಿ ನೀಡುವ ಸಂದರ್ಭದಲ್ಲಿ ತಮ್ಮೊಂದಿಗೆ ಹಾಗೂ ಶಾಲೆಯ ಶಿಕ್ಷಕರೊಂದಿಗೆ ಕೈಜೋಡಿಸಿದ ಸ್ನೇಹಿತರನ್ನು ಸ್ಮರಿಸಿದರು.

ಮುಖ್ಯ ಶಿಕ್ಷಕಿ ಅಂಬಿಕಾ ಮಾತನಾಡಿ, ಪೋಷಕರು ಮಕ್ಕಳ ವಿದ್ಯಾಭ್ಯಾಸದ ಬಗ್ಗೆ ಹೆಚ್ಚಿನ ಕಾಳಜಿ ವಹಿಸಿ, ಅವರ ಪ್ರತಿಭೆಯನ್ನು ಗುರುತಿಸಿ ನಿರಂತರ ಪ್ರೋತ್ಸಾಹ ನೀಡುವಂತೆ ಸಲಹೆ ನೀಡಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಎಸ್‌ಡಿಎಂಸಿ ಅಧ್ಯಕ್ಷ ಹಾಲಪ್ಪ ವಹಿಸಿದ್ದರು.

ಸಾಧಕ ವಿದ್ಯಾರ್ಥಿಗಳ ಪೋಷಕರಾದ ನಿಂಗರಾಜು, ಲತಾ, ಭಾರತಿ, ಸಿ.ಇ. ಹಾಲಪ್ಪ ಹಾಗೂ ಗೀತಾಮಣಿ ಮತ್ತಿತರರು ಪಾಲ್ಗೊಂಡಿದ್ದರು.

# ಶಿಕ್ಷಕರ ಆರೋಗ್ಯವೇ ಸಮಾಜದ ಆರೋಗ್ಯದ ಬುನಾದಿ: ಶಿವರಾಜು




**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಬೇಲೂರು: ಶಿಕ್ಷಕರು ರಾಷ್ಟ್ರ ನಿರ್ಮಾಣದ ಶಿಲ್ಪಿಗಳು. ಅವರು ಪ್ರತಿದಿನ ನೂರಾರು ವಿದ್ಯಾರ್ಥಿಗಳ ಭವಿಷ್ಯ ರೂಪಿಸುವ ಮಹತ್ತರ ಜವಾಬ್ದಾರಿಯನ್ನು ಹೊತ್ತು ಒತ್ತಡದ ನಡುವೆ ಕಾರ್ಯನಿರ್ವಹಿಸುತ್ತಾರೆ. ಆದ್ದರಿಂದ ಶಿಕ್ಷಕರ ಆರೋಗ್ಯದ ಬಗ್ಗೆ ವಿಶೇಷ ಕಾಳಜಿ ವಹಿಸುವುದು ಅತ್ಯಗತ್ಯ ಎಂದು ರೋಟರಿ ಕ್ಲಬ್ ಅಧ್ಯಕ್ಷ ಬಿ.ಬಿ.ಶಿವರಾಜು ಹೇಳಿದರು.

ಬೇಲೂರು ರೋಟರಿ ಕ್ಲಬ್ ವತಿಯಿಂದ ಪಟ್ಟಣದ ಪೂರ್ಣಪ್ರಜ್ಞ ವಿದ್ಯಾ ಸಂಸ್ಥೆಯಲ್ಲಿ ಶಿಕ್ಷಕ ವೃಂದ ಹಾಗೂ ಸಿಬ್ಬಂದಿಗೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಅಸಂಕ್ರಾಮಿಕ ರೋಗಗಳ (ಎನ್‌ಸಿಡಿ) ವಿಭಾಗದ ಸಹಯೋಗದಲ್ಲಿ ಉಚಿತ ರಕ್ತದೊತ್ತಡ ಮತ್ತು ಮಧುಮೇಹ ತಪಾಸಣೆ ಹಾಗೂ ಆರೋಗ್ಯ ಜಾಗೃತಿ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಶಿಕ್ಷಕರು ತಮ್ಮ ವೃತ್ತಿಯ ಒತ್ತಡ ಮತ್ತು ಜವಾಬ್ದಾರಿಗಳ ನಡುವೆ ಅನೇಕ ಬಾರಿ ಆರೋಗ್ಯ ಕಡೆಗಣಿಸುವ ಪರಿಸ್ಥಿತಿ ಉಂಟಾಗುತ್ತದೆ. ನಿಯಮಿತ ಆರೋಗ್ಯ ತಪಾಸಣೆ, ಸಮತೋಲಿತ ಆಹಾರ, ಪ್ರತಿದಿನ ವ್ಯಾಯಾಮ, ಮಾನಸಿಕ ನೆಮ್ಮದಿ ಹಾಗೂ ಉತ್ತಮ ಜೀವನಶೈಲಿಯನ್ನು ಅಳವಡಿಸಿಕೊಳ್ಳುವುದರಿಂದ ಅನೇಕ ಅಸಂಕ್ರಾಮಿಕ ರೋಗಗಳನ್ನು ಆರಂಭಿಕ ಹಂತದಲ್ಲಿಯೇ ತಡೆಗಟ್ಟಬಹುದು. ಆರೋಗ್ಯವಂತ ಶಿಕ್ಷಕರಿಂದಲೇ ಆರೋಗ್ಯವಂತ ವಿದ್ಯಾರ್ಥಿಗಳು ಹಾಗೂ ಆರೋಗ್ಯಕರ ಸಮಾಜ ನಿರ್ಮಾಣ ಸಾಧ್ಯವಾಗುತ್ತದೆಂದರು.

ಪ್ರಾಂಶುಪಾಲ ಎನ್. ಪ್ರಶಾಂತ್ ಕುಮಾರ್ ಮಾತನಾಡಿ, ಶಿಕ್ಷಕರ ಆರೋಗ್ಯದ ಬಗ್ಗೆ ಕಾಳಜಿ ವಹಿಸಿ ಶಾಲೆಯಲ್ಲಿಯೇ ಉಚಿತ ಆರೋಗ್ಯ ತಪಾಸಣೆ ಮತ್ತು ಜಾಗೃತಿ ಕಾರ್ಯಕ್ರಮ ಆಯೋಜಿಸಿರುವ ರೋಟರಿ ಕ್ಲಬ್‌ನ ಸಾಮಾಜಿಕ ಕಳಕಳಿ ಶ್ಲಾಘನೀಯವಾಗಿದೆ. ಇಂತಹ ಕಾರ್ಯಕ್ರಮಗಳು ಶಿಕ್ಷಕರಲ್ಲಿ ಆರೋಗ್ಯ ಜಾಗೃತಿ ಮೂಡಿಸುವುದರ ಜೊತೆಗೆ ಸಮಯೋಚಿತ ಚಿಕಿತ್ಸೆ ಪಡೆಯಲು ಸಹಕಾರಿಯಾಗುತ್ತವೆ ಎಂದು ತಿಳಿಸಿದರು.

ಅಸಾಂಕ್ರಾಮಿಕ ರೋಗಗಳ (ಎನ್‌ಸಿಡಿ) ವಿಭಾಗದ ಕೌನ್ಸಿಲರ್ ಆಲೇಶ್ ಮಾತನಾಡಿ, ಮಧುಮೇಹ, ರಕ್ತದೊತ್ತಡ, ಹೃದಯ ಸಂಬಂಧಿ ಕಾಯಿಲೆಗಳಂತಹ ಅಸಂಕ್ರಾಮಿಕ ರೋಗಗಳನ್ನು ಆರಂಭಿಕ ಹಂತದಲ್ಲಿಯೇ ಪತ್ತೆಹಚ್ಚುವ ಉದ್ದೇಶದಿಂದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ತಾಲೂಕು ವ್ಯಾಪ್ತಿಯಲ್ಲಿ ಉಚಿತ ಆರೋಗ್ಯ ತಪಾಸಣೆ ಹಾಗೂ ಜಾಗೃತಿ ಕಾರ್ಯಕ್ರಮಗಳನ್ನು ನಿರಂತರವಾಗಿ ನಡೆಸುತ್ತಿದೆ. ಸಾರ್ವಜನಿಕರು ಸರ್ಕಾರದ ಈ ಉಚಿತ ಸೇವೆಗಳ ಸದುಪಯೋಗ ಪಡೆದು ನಿಯಮಿತವಾಗಿ ಆರೋಗ್ಯ ತಪಾಸಣೆ ಮಾಡಿಸಿಕೊಳ್ಳಬೇಕು ಎಂದು ಮನವಿ ಮಾಡಿದರು.

# ಇಂದಿನಿಂದ ಆ. 4ರ ವರೆಗೆ ಲಕ್ಷ್ಮಿ ವೆಂಕಟರಮಣ ಸ್ವಾಮಿ ಜಾತ್ರೆ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಅರಸೀಕೆರೆ: ರಾಜ್ಯದ ತಿರುಪತಿ ಎಂದೇ ಪ್ರಸಿದ್ಧಿಯಾಗಿರುವ ತಾಲೂಕಿನ ಸುಕ್ಷೇತ್ರ, ಮಾಲೆಕಲ್ಲು ಅಮರಗಿರಿ ತಿರುಪತಿಯಲ್ಲಿ ನೆಲೆಸಿರುವ ಲಕ್ಷ್ಮಿ ವೆಂಕಟರಮಣ ಸ್ವಾಮಿಯ ಜಾತ್ರಾ ಮಹೋತ್ಸವ ದೇವಾಲಯದ ಸಂಪ್ರದಾಯದಂತೆ ನಡೆಯಲಿದ್ದು ಈಗಾಗಲೇ ಮುಜರಾಯಿ ಇಲಾಖೆ ಮತ್ತು ದೇವಾಲಯ ಅಭಿವೃದ್ಧಿ ಸಮಿತಿ ಸಕಲ ಸಿದ್ಧತೆಯಲ್ಲಿ ತೊಡಗಿದೆ ಎಂದು ಅಭಿವೃದ್ಧಿ ಸಮಿತಿಯ ಟಿ.ಆರ್. ನಾಗರಾಜ್ ಹೇಳಿದರು.

ಜಾತ್ರಾ ಮಹೋತ್ಸವ ಕುರಿತು ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಜು. 19 ರಿಂದ ಆಗಸ್ಟ್ 4ರ ವರೆಗೆ ವೆಂಕಟರಮಣ ಸ್ವಾಮಿ ಜಾತ್ರಾ ಮಹೋತ್ಸವ ನಡೆಯಲಿದ್ದು ಪ್ರತಿದಿನ ವಿಶೇಷ ಪೂಜೆ ಅಲಂಕಾರ ಪ್ರಿಯರಾದ ವೆಂಕಟರಮಣ ಸ್ವಾಮಿಗೆ ನಾನಾ ಅಲಂಕಾರಗಳು ನಂತರ ದೇವಾಲಯದ ಆವರಣದಲ್ಲಿ ಉತ್ಸವಗಳು ಸಂಪ್ರದಾಯದಂತೆ ಜರುಗಲಿದೆ ಎಂದು ತಿಳಿಸಿದರು.

ಶ್ರೀದೇವಿ ಭೂದೇವಿ ಸಮೇತನಾದ ವೆಂಕಟರಮಣ ಸ್ವಾಮಿಯ ಮಹಾ ರಥೋತ್ಸವವು ಜುಲೈ 26ರಂದು ಮಧ್ಯಾಹ್ನ ಜರುಗಲಿದ್ದು ನಾಡಿನಾದ್ಯಂತ ಇರುವ ಭಕ್ತರು ಲಕ್ಷಾಂತರ ಸಂಖ್ಯೆಯಲ್ಲಿ ರಥೋತ್ಸವದಲ್ಲಿ ಪಾಲ್ಗೊಳ್ಳುವುದರಿಂದ ಯಾವುದೇ ರೀತಿಯ ಅಹಿತಕರ ಘಟನೆ ಸಂಭವಿಸದಂತೆ ಪೊಲೀಸ್ ಇಲಾಖೆ ರಕ್ಷಣೆ ನೀಡುವಂತೆ ಹಾಗೂ ನಗರದಿಂದ 4 ಕಿ.ಮೀ. ದೂರದಲ್ಲಿರುವ ಮಾಲೆಕಲ್ಲು ತಿರುಪತಿ ಗ್ರಾಮಕ್ಕೆ ಭಕ್ತರು ಬಂದು ಹೋಗಲು ಸಾರಿಗೆ ಇಲಾಖೆ ವತಿಯಿಂದ ವಿಶೇಷ ಬಸ್ ವ್ಯವಸ್ಥೆ ಕಲ್ಪಿಸಿ ಕೊಡುವಂತೆ ಈಗಾಗಲೇ ಮನವಿ ಮಾಡಲಾಗಿದೆ ಎಂದು ತಿಳಿಸಿದರು.

ದೇವಾಲಯದ ಆಗಮಿಕರಾದ ಎನ್.ರಾಮ್ ಪ್ರಸಾದ್ ಮಾತನಾಡಿ, ಸಾವಿರಾರು ವರ್ಷಗಳ ಇತಿಹಾಸವನ್ನು ಇಲ್ಲಿನ ಲಕ್ಷ್ಮಿ ವೆಂಕಟರಮಣ ಸ್ವಾಮಿ ದೇವಾಲಯ ಹೊಂದಿದ್ದು ದೇವಾಲಯದ ಪೂಜಾ ವಿಧಾನಗಳು ವೈಖಾನಸಾಗಮ ರೀತಿಯಲ್ಲಿ ನಡೆಯಲಿದ್ದು ಆಷಾಢ ಮಾಸದ ದ್ವಾದಶಿ ಅಂದು ವೆಂಕಟರಮಣ ಸ್ವಾಮಿಯ ಮಹಾ ರಥೋತ್ಸವ ನಡೆಯುವುದು ಇಲ್ಲಿನ ವಿಶೇಷ ಎಂದರು.

17 ದಿನಗಳ ಕಾಲ ನಡೆಯುವ ಮಹೋತ್ಸವವು ಪ್ರತಿದಿನ ವಿಶೇಷತೆಯಿಂದ ಕೂಡಿರುತ್ತದೆ. ಈ ಜಾತ್ರಾ ಮಹೋತ್ಸವದಲ್ಲಿ ಶ್ರದ್ಧಾ ಭಕ್ತಿಯಿಂದ ಭಕ್ತರು ಪಾಲ್ಗೊಂಡು ಲಕ್ಷ್ಮಿ ವೆಂಕಟರಮಣ ಸ್ವಾಮಿಯ ದರ್ಶನ ಮಾಡಿದರೆ ಇಷ್ಟಾರ್ಥಗಳು ಈಡೇರುತ್ತವೆ ಎಂದು ಹೇಳಿದರು.

ದೇವಾಲಯದ ಅಭಿವೃದ್ಧಿ ಸಮಿತಿಯ ನಿಖಿಲ್ ಯೋಗನಾಥನ್, ದೇವಾಲಯದ ಪಾರುಪತ್ತೆದಾರ್ ಲೋಕೇಶಯ್ಯ ಮತ್ತಿತರರಿದ್ದರು.

# ತಂದೆ ಕೊಲೆ ಮಾಡಿ ಆತ್ಮಹತ್ಯೆ ಮಾಡಿಕೊಂಡ ಪುತ್ರ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**



ಚನ್ನರಾಯಪಟ್ಟಣ : ಆಸ್ತಿ ಮಾರಾಟದ ವಿಷಯವಾಗಿ ತಂದೆಯ ಮೇಲೆ ವ್ಯಾಜ್ಯವಾಡುತ್ತಿದ್ದ ಪುತ್ರ ತಂದೆಯನ್ನು ಮಾರಾಕಾಸ್ತ್ರದಿಂದ ಕೊಲೆ ಮಾಡಿ ಆತನೂ ಕೂಡ ನೇಣಿಗೆ ಶರಣಾಗಿರುವ ಘಟನೆ ಪಟ್ಟಣದ ಗೂರಮಾರನಹಳ್ಳಿ ವಾರ್ಡ್‌ನಲ್ಲಿ ಸಂಭವಿಸಿದೆ.

ನಿವೃತ್ತ ಮುಖ್ಯಶಿಕ್ಷಕ ಬಿ.ಎನ್.ಚನ್ನೇಗೌಡ(73) ಕೊಲೆಯಾದ ವ್ಯಕ್ತಿ, ಬಿಂದುಕುಮಾರ್(42) ಕೊಲೆ ಮಾಡಿ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾನೆ. ಶಿಕ್ಷಕ ವೃತ್ತಿಯಿಂದ ನಿವೃತ್ತಿಯಾದ ಬಿ.ಎನ್. ಚನ್ನೇಗೌಡರಿಗೆ ಇಬ್ಬರು ಪುತ್ರರಿದ್ದು ಮೊದಲ ಪತ್ರ ಗಿರೀಶ್‌ಪಟ್ಟಣದ ನಾಗಸಮುದ್ರ ರಸ್ತೆಯಲ್ಲಿ ಬಾಡಿಗೆ ಮನೆಯಲ್ಲಿ ವಾಸವಿದ್ದ ಎಲೆಟ್ರಿಕ್ ಗುತ್ತಿಗೆದಾರ ಕೆಲಸ ಮಾಡಿಕೊಂಡಿದ್ದ ಎರಡನೇ ಪುತ್ರ ಬಿಂದುಕುಮಾರ್ ಬೆಂಗಳೂರಿನಲ್ಲಿ ಕಾರ್‌ಡ್ರೈವರ್‌ಕೆಲಸ ಮಾಡಿಕೊಂಡಿದ್ದು ಕುಟುಂಬ ಸಮೇತ ಬೆಂಗಳೂರಿನಲ್ಲಿ ವಾಸಿದ್ದು ವಾರಾಂತ್ಯದಲ್ಲಿ ತನ್ನೂರಿಗೆ ಬಂದು ಹೋಗುತ್ತಿದ್ದ ಎನ್ನಲಾಗಿದೆ.

ಕಳೆದ ಹತ್ತು ವರ್ಷದಿಂದ ಗೂರನಹಳ್ಳಿ ವಾರ್ಡಿನಲ್ಲಿ ಇರುವ ಮನೆ ಮಾರಾಟ ಮಾಡಿ ಹಣ ಕೊಡುವಂತೆ ಕಿರಿಯ ಪುತ್ರ ಬಿಂದುಕುಮಾರ್ ತಂದೆ ಮೇಲೆ ಒತ್ತಡ ಹಾಕುತ್ತಿದ್ದ, ಮನೆ ಮಾರಾಟದ ವಿಷಯವಾಗಿ ತಂದೆ ಹಾಗೂ ಪುತ್ರನ ನಡುವೆ ಆಗಾಗ ವ್ಯಾಜ್ಯವಾಗುತ್ತಿದ್ದು ಶನಿವಾರ ಬೆಳಗ್ಗೆ ಬಿಂದುಕುಮಾರ್‌ಗೂರನಹಳ್ಳಿಗೆ ಆಗಮಿಸಿದ್ದ ವೇಳೆ ಮನೆ ಮಾರಾಟದ ವಿಷಯವಾಗಿ ಜಗಳವಾಡಿ ಜಗಳ ತಾರಕ್ಕೇರಿದಾಗ ತಂದೆಯನ್ನು ಕೊಲೆ ಮಾಡಿ ತಾನೂ ಕೂಡ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾನೆ ಎಂದು ಸ್ಥಳಿಯರು ಮಾಧ್ಯಮಕ್ಕೆ ತಿಳಿಸಿದ್ದಾರೆ.

ಸ್ಥಳಕ್ಕೆ ಹಾಸನ ಜಿಲ್ಲಾ ಪೊಲೀಸ್‌ವರಿಷ್ಠಾಧಿಕಾರಿ ಶುಭನ್ವಿತಾ ಆಗಮಿಸಿ ಪರಿಶೀಲನೆ ಮಾಡಿದ್ದು ನಗರ ಪೊಲೀಸ್‌ಠಾಣೆಯ ಅಧಿಕಾರಿಗಳು ಹಾಗೂ ಸಿಬ್ಬಂದಿ ಘಟನೆ ಬಗ್ಗೆ ದೂರು ದಾಖಲು ಮಾಡಿಕೊಂಡಿದ್ದಾರೆ.

## ಆತ್ಮ ಶ್ರೇಷ್ಠ ಕೃಷಿಕ ಪ್ರಶಸ್ತಿಗೆ ಅರ್ಜಿ ಆಹ್ವಾನ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ : ಆತ್ಮ ಯೋಜನೆಯಡಿ 2026-27ನೇ ಸಾಲಿನ ಹಾಸನ ತಾಲ್ಲೂಕು ಮಟ್ಟದ ಶ್ರೇಷ್ಠ ಕೃಷಿಕ ಪ್ರಶಸ್ತಿಗೆ ಅರ್ಜಿಗಳನ್ನು ಆಹ್ವಾನಿಸಲಾಗಿದೆ ಎಂದು ಹಾಸನ ತಾಲ್ಲೂಕಿನ ಸಹಾಯಕ ಕೃಷಿ ನಿರ್ದೇಶಕರು ತಿಳಿಸಿದ್ದಾರೆ.

ಸಮಗ್ರ ಬೆಳೆ ಪದ್ಧತಿ, ಸಮಗ್ರ ನೀರು ನಿರ್ವಹಣೆ, ಸಾವಯವ ಕೃಷಿ, ಆಧುನಿಕ ಯಂತ್ರೋಪಕರಣ ಬಳಕೆ, ತೋಟಗಾರಿಕೆ, ಹೈನುಗಾರಿಕೆ, ಕೋಳಿ ಸಾಕಾಣಿಕೆ, ಮೀನುಗಾರಿಕೆ, ರೇಷ್ಮೆ ಬೇಸಾಯ, ಹಸಿರು ಮನೆ ಅಳವಡಿಕೆ, ಕೃಷಿ ಸಂಸ್ಕರಣೆ, ಅರಣ್ಯ ಕೃಷಿ, ಆಡು, ಕುರಿ, ಮೊಲ ಸಾಕಾಣಿಕೆ ಇತ್ಯಾದಿ ಕೃಷಿ ಚಟುವಟಿಕೆಗಳಲ್ಲಿ ಸಾಧನೆ ಮಾಡಿದವರು ತಾಲ್ಲೂಕು ಮಟ್ಟದ ಶ್ರೇಷ್ಠ ಕೃಷಿಕ ಪ್ರಶಸ್ತಿಗೆ ಅರ್ಜಿಯನ್ನು ಸಲ್ಲಿಸಲು ಅರ್ಹರಿರುತ್ತಾರೆ.

ರೈತರು ಮತ್ತು ರೈತ ಮಹಿಳೆಯರು ಅರ್ಜಿಗಳನ್ನು ಸಹಾಯಕ ಕೃಷಿ ನಿರ್ದೇಶಕರು, ಹಾಸನ ತಾಲ್ಲೂಕು ಕಚೇರಿಯಿಂದ ಪಡೆದುಕೊಂಡು ಜು.31 ರೊಳಗೆ ಸಲ್ಲಿಸುವುದು, ಪ್ರಶಸ್ತಿ ಪಡೆದ ರೈತರು ಪುನಃ ಅರ್ಜಿ ಸಲ್ಲಿಸಲು ಅರ್ಹರಿರುವುದಿಲ್ಲ

## ಇತಿಹಾಸದಲ್ಲಿ ಈ ದಿನ

### ಜುಲೈ-19

1848: ಅಮೆರಿಕದ ನ್ಯೂಯಾರ್ಕ್‌ನ ಸೆನೆಕಾ ಫಾಲ್ಸ್‌ನಲ್ಲಿ ಮಹಿಳೆಯರ ಹಕ್ಕುಗಳ ಕುರಿತ ಮೊದಲ ಐತಿಹಾಸಿಕ ಸಮಾವೇಶ ಆರಂಭವಾಯಿತು.

1900: ಪ್ಯಾರಿಸ್ ಮೆಟ್ರೋ ರೈಲು ಸೇವೆ ಸಾರ್ವಜನಿಕರ ಬಳಕೆಗೆ ಆರಂಭವಾಯಿತು.

1969: ಮಾನವನನ್ನು ಚಂದ್ರನ ಮೇಲೆ ಇಳಿಸಿದ ಅಪೊಲೊ11 ನೌಕೆ ಚಂದ್ರನ ಕಕ್ಷೆಯನ್ನು ಪ್ರವೇಶಿಸಿತು.

1979: ನಿಕರಾಗುವಾದಲ್ಲಿ ಸ್ಯಾಂಡಿನಿಸ್ಟಾ ಕ್ರಾಂತಿಯ ಬಳಿಕ ಹೊಸ ಸರ್ಕಾರ ಅಧಿಕಾರಕ್ಕೆ ಬಂದಿತು.

1992: ಥೈಲ್ಯಾಂಡ್‌ನ ಬ್ಯಾಂಕಾಕ್‌ನಲ್ಲಿ 1992ರ ವಿಶ್ವ ಸುಂದರಿ (ಮಿಸ್ ಯೂನಿವರ್ಸ್) ಸ್ಪರ್ಧೆ ನಡೆಯಿತು.

**ಜನನ**

1814: ಸ್ಯಾಮುಯೆಲ್ ಕೋಲ್ಟ್, ರಿವಾಲ್ವರ್ ಆವಿಷ್ಕಾರಕ

1893: ವ್ಲಾದಿಮಿರ್ ಮಾಯಕೋವ್ಸ್ಕಿ, ರಷ್ಯಾದ ಕವಿ

1947: ಬ್ರಿಯಾನ್ ಮೇ, ಬ್ರಿಟಿಷ್ ಗಿಟಾರ್ ವಾದಕ ಮತ್ತು ಕ್ವೀನ್ ಸಂಗೀತ ತಂಡದ ಸದಸ್ಯ

**ನಿಧನ**

2012: ಒಮರ್ ಸುಲೈಮಾನ್, ಈಜಿಪ್ಟ್‌ನ ಮಾಜಿ ಉಪರಾಷ್ಟ್ರಪತಿ

# ಮೀಟ್ ಮಿಸ್ಟರ್ ಗಜ್‌ರಾಜ್-4

**ಧನಂಜಯ ಜೀವಾಳ ಬಿ.ಕೆ.**

**ಗ್ರಾಮಾಯಣ-25**

ಈ ನೀರಿನ ಹರಿವಿನ ಸಹವಾಸವೇ ಬೇಡವೆಂದು ಸೀದಾ ವಿನಯ್, ಸತೀಶರನ್ನು ಬಿಟ್ಟುಬಂದಿದ್ದ ಏರಿಗೇ ಏದುಸಿರು ಬಿಡುತ್ತಾ ತಲುಪಿದೆವು. ಅವರಿಬ್ಬರೂ ಅತ್ತ ಕ್ಯಾಂಪಿಗೆ ಹಿಂದಿರುಗಲಾರದೇ ನಾವಿದ್ದಲ್ಲಿಗೂ ಬರಲಾಗದೇ, ಕೈಯಲ್ಲಿ ಟಾರ್ಚೂ ಇಲ್ಲದೇ ಆ ಕಗ್ಗಾಡಿನ ನಡುವೆ ಕತ್ತಲೆಯಲ್ಲಿ ಭಯವಿಹ್ವಲರಾಗಿ ನಿಂತಿದ್ದರು. ನಾವು ಬಂದದ್ದೇ ತಡ ನಿಂತಲ್ಲೇ ಬೆವರುತ್ತಾ ನೆಂದು ಹೋಗಿದ್ದ ಅವರು ಇಲ್ಲಿ ಬೇಡ, ಬೇರೆಲ್ಲಾದರೂ ಸಿಗುತ್ತಾ, ನೋಡಣ ಎಂದು ಸಲಹೆ ನೀಡಿದರು.

ತಿರುಗಿ ನಾವು ರೈಲ್ವೇ ಹಳಿಯ ಮೇಲೆ ನಡೆಯಲಾರಂಭಿಸಿದೆವು. ಬಲಗೈಯಲ್ಲಿ ಕತ್ತಿ, ಎಡಗೈಯಲ್ಲಿ ಟಾರ್ಚ್ ಹಿಡಿದ ನಾನು ಎದುರಿಗಿದ್ದ ಆಳೆತ್ತರದ ಹುಲ್ಲನ್ನು ಎರಡು ಬದಿಗೆ ಸರಿಸುತ್ತಾ ಮುಂದಿನ ದಾರಿಯನ್ನು ನೋಡುತ್ತಾ ಎಲ್ಲರಿಗಿಂತ ಮುಂದೆ ನಡೆಯುತ್ತಿದ್ದೆ. ಹಳಿಯ ಎರಡೂ ಬದಿಯಲ್ಲಿದ್ದ ಮುಳ್ಳಿನ ಪೊದೆಗಳು ಹಳಿಯ ಪಕ್ಕದ ಜಲ್ಲಿಯನ್ನು ದಾಟಿ ಹಳಿಯನ್ನು ಆಕ್ರಮಿಸುವ ಹವಣಿಕೆಯಲ್ಲಿದ್ದವು. ಹಳಿಯ ಮೇಲೆ ಬೆಳೆದಿದ್ದ ಹುಲ್ಲು ಮತ್ತು ಮುಳ್ಳು ಪೊದೆಗಳ ನಡುವೆ ಒತ್ತುವರಿಗೆ ಪೈಪೋಟಿಯೇ ಏರ್ಪಟ್ಟಿತ್ತು. ಆ ಪೈಪೋಟಿಯ ನಡುವೆ ರಾತ್ರಿಯ ಸಮಯದಲ್ಲಿ ಗಂಜಿ ಬೇಯಿಸಲು ನೀರು ಅರಸುತ್ತಾ ಅಲೆಯುತ್ತಿರುವ ನಾವುಗಳು, ಈಗಾಗಲೇ ನಮ್ಮ ಕ್ಯಾಂಪಿನಿಂದ ಸುಮಾರು ಎರಡು ಕಿಲೋ ಮೀಟರ್ ದೂರದಲ್ಲಿದ್ದೆವು.

ನನ್ನ ಹಿಂದೆ ಬರುತಿದ್ದ ರಂಗಸ್ವಾಮಿಯು ವಿನಯ್ ಹಾಗೂ ಸತೀಶರಿಗೆ ಕಮರಿಯೊಳಗೆ ಜಾರಿ ಬಿದ್ದ ವಿವರಗಳನ್ನು ಒಪ್ಪಿಸುತಿದ್ದ, ಆ ಇಬ್ಬರೂ ಇತ್ತ ಬೆಳಕಿಲ್ಲದೇ ನಮಗೆ ಕಾಯುತ್ತಾ ನಿಂತ ಫಜೀತಿಯನ್ನು ತೋಡಿಕೊಳ್ಳುತಿದ್ದರು. ಆಳೆತ್ತರದ ಹುಲ್ಲನ್ನು ಸರಿಸುತ್ತಾ ಹಳಿಯ ಮೇಲೆ ನಡೆಯುತಿದ್ದ ನಾನು ಧುತ್ತೆಂದು ನಿಂತೆ, ಏನೋ ಅಸಹಜವಾದುದು ಎದುರಿಗಿದೆ ಎನಿಸಿತು. ಇದೇನಿದು? ಹಳಿಯ ಮೇಲೆ ಇಷ್ಟು ದೊಡ್ಡ ಮರವೇ? ಪಟ್ಟಿ ಪಟ್ಟಿ ಇದೆಯಲ್ಲ? ಸಣ್ಣ ಸಣ್ಣ ಗೆರೆ, ಬುಡದಲ್ಲಿ ಸಣ್ಣದಾಗಿದ್ದು ಮೇಲಕ್ಕೆ ಹೋದಂತೆ ದಪ್ಪಗಾಗಿದೆಯಲ್ಲ! ಅರೆ! ಇದೇನು? ತೂಗಾಡ್ತಿದೆಯಲ್ಲ! ಹ್ಹಾ!! ಓಡೀ ಓಡೀ ಎಂದವನೇ ಯಾವ ಮಾಯದಲ್ಲಿ ಹಿಂದಕ್ಕೆ ತಿರುಗಿದೆನೋ, ಇನ್ನೂ ನನ್ನ ಮಾತನ್ನು ಕೇಳಿಸಿಕೊಂಡು ಅದಕ್ಕೆ ಪ್ರತಿಕ್ರಿಯಿಸಿಯೇ ಇರದಿದ್ದ ರಂಗಸ್ವಾಮಿಯನ್ನು ತಳ್ಳಿಕೊಂಡೇ ಓಡತೊಡಗಿದೆ. ನನ್ನ ಓಟಕ್ಕೆ ಅಡ್ಡಬಂದ ಅಗಾಧ ದೇಹದ ವಿನಯ್‌ನನ್ನೂ ಗುದ್ದಿಕೊಂಡು ನಾನೂ ಬಿದ್ದು, ಅವನನ್ನೂ ಕೆಡವಿ, ಮೊಣಕಾಲಿಗೆ ಪೆಟ್ಟು ಮಾಡಿಕೊಂಡು ಸತ್ತೆವೋ ಕೆಟ್ಟೆವೋ ಎಂದುಕೊಂಡು ಎದ್ದೂ ಬಿದ್ದೂ ಓಡಿದೆವು. ಆ ಮೂವರೂ ಏನು? ಏಕೆಂದು ತಿಳಿಯದೇ, ನಾನು ಓಡಿದೆನೆಂದು ಅದೇ ಗೊಂದಲದಲ್ಲಿ ದಿಕ್ಕಾಪಾಲಾಗಿ ಓಡಿದರು. ಸತೀಶನಂತೂ ಈ ಹಿಂದೆ ನಾವು ನೀರಿಗಾಗಿ ಇಳಿದಿದ್ದ ಕೊರಕಲಿನತ್ತಲೇ ಪಲಾಯನಗೈದಿದ್ದ.

ನನ್ನೊಬ್ಬನಲ್ಲಿ ಬಿಟ್ಟರೆ ಅವರಲ್ಲಾರಲ್ಲೂ ಟಾರ್ಚ್ ಇರಲಿಲ್ಲ. ನೀರು ತರುವ ಹುಮ್ಮಸ್ಸಿನಲ್ಲಿ ಅವರವರ ಬ್ಯಾಗಿನಲ್ಲಿದ್ದ ಕೈ ಟಾರ್ಚುಗಳನ್ನು ಅಲ್ಲಿಯೇ ಬಿಟ್ಟು ಕ್ಯಾನು ಬಾಟಲಿಗಳೊಂದಿಗೆ ನನ್ನೊಡನೆ ಬಂದಿದ್ದರು. ಸ್ವಲ್ಪ ಸುರಕ್ಷಿತ ದೂರದವರೆಗೆ ಓಡಿದ ನಾನು ಎತ್ತರದ ಕಲ್ಲೊಂದರ ಮೇಲೆ ನಿಂತುಕೊಂಡು ಟಾರ್ಚ್ ಬೆಳಕನ್ನು ನಾವು ಓಡಲು ಶುರುಮಾಡಿದ ಕಡೆಗೆ ಹರಿಸಿ ಆ ಮೂವರಿಗೂ ನಾನಿರುವ ಸ್ಥಳವನ್ನು ಸೂಚಿಸತೊಡಗಿದೆ. ಬಿದ್ದು ಮುಖ ಮೂತಿ ಕೆತ್ತಿಸಿಕೊಂಡಿದ್ದ ವಿನಯ್, ಹಿಮ್ಮಡಿ ಉಳುಕಿಸಿಕೊಂಡಿದ್ದ ಸತೀಶ ಇಬ್ಬರೂ ಉಸಿರುಸಿರು ಬಿಡುತ್ತಾ ಬಂದರು. ರಂಗಸ್ವಾಮಿ ನನ್ನ ಹಿಂದಿನಿಂದಲೇ ಗಂಜಿಪಾತ್ರೆಯೊಂದಿಗೆ ಪ್ರತ್ಯಕ್ಷನಾದ. ಎಂತ ಅದು? ಯಾಕೆ ಓಡಿ ಓಡಿ ಅಂದದ್ದು ಎಂದರು. ಏನಿಲ್ಲ ನಡೀರಿ, ಆಮೇಲೆ ಹೇಳ್ತೀನಿ ಎಂದೆ. ವಿನಯ್ ಮತ್ತೂ ಒತ್ತಾಯ ಮಾಡಿದ, ಹೇಳ್ತೀನಿ, ಮೊದಲು ನೀರು ತಗೊಳ್ಳೋಣ ಎಂದೆ. ಆದಾದ ನಂತರ ಯಾವುದೇ ಸಾಹಸಕ್ಕೆ ಕೈಹಾಕದೇ ಹಳಿಯ ಎರಡೂ ಬದಿಯಲ್ಲಿ ನೀರು ಹರಿದು ಹೋಗಲು ಮಾಡಿದ್ದ ಕಿರು ಚರಂಡಿಯಲ್ಲಿ ತೆಳುವಾಗಿ ಹರಿಯುತಿದ್ದ ನೀರನ್ನೇ ಸಂಗ್ರಹಿಸುವುದೆಂದು ತೀರ್ಮಾನಿಸಿದೆವು. ಆ ಡ್ರೈನೇಜಿನಲ್ಲಿ ನೀರಿನೊಡನೆ ಹರಿದು ಬಂದಿದ್ದ ಮರಳನ್ನು ಬಗೆದು, ಒಂದಷ್ಟು ಹಳ್ಳ ಮಾಡಿದೆವು.

ನೀರು ನಿಧಾನವಾಗಿ ಆ ಗುಂಡಿಯೊಳಗೆ ತುಂಬಿಕೊಳ್ಳಲಾರಂಬಿಸಿತು. ಮಣ್ಣು, ಮರಳು ಮಿಶ್ರಿತವಾಗಿದ್ದ ಆ ಕಲಕು ನೀರನ್ನೇ ರಂಗಸ್ವಾಮಿ ಬೊಗಸೆಯಲ್ಲಿ ಗೋಚಿ ಗೋಚಿ ಪಾತ್ರೆಗೆ ಸುರಿಯತೊಡಗಿದ. ಸುಮಾರು ಕಾಲು ಗಂಟೆಯ ಅವಧಿಯಲ್ಲಿ ಮುಕ್ಕಾಲು ಪಾತ್ರೆ ತುಂಬಿತು, ಸ್ವಲ್ಪ ಸಮಯ ಆ ಗೋಡು ನೀರನ್ನು ತಿಳಿಯಾಗಲು ಬಿಟ್ಟು ಕ್ಯಾನಿಗೆ, ಬಾಟಲಿಗಳಿಗೆ ನಿಧಾನವಾಗಿ ವಿನಯ್, ಸತೀಶ್ ಬಗ್ಗಿಸಿದರು. ಈ ಕಾರ್ಯ ನಡೆಯುತ್ತಿರುವಾಗ ಎತ್ತರದ ಜಾಗದಲ್ಲಿ ನಿಂತಿದ್ದ ನಾನು, ನಾವು ಓಡಲು ಪ್ರಾರಂಭಿಸಿದ ದಿಕ್ಕಿನ ಕಡೆಗೆ ಟಾರ್ಚ್ ಬೆಳಕನ್ನು ಹಾಯಿಸುತ್ತಲೇ ವಾಚ್ ಮನ್ ಕೆಲಸ ನಿರ್ವಹಿಸುತಿದ್ದೆ. ಸರಿ ನಡೆಯಿರಿ ಗಂಜಿ ಬೇಯಿಸಲು ಇಷ್ಟು ನೀರು ಸಾಕಾಗಬಹುದು, ಬೆಳಗ್ಗೆ ಎದ್ದು ಮುಂದಿನದನ್ನು ಯೋಚಿಸೋಣ ಎಂದು ನಮ್ಮ ಕ್ಯಾಂಪಿನೆಡೆಗೆ ಹೊರಟೆವು.

ತಡೆಯಲಾರದ ಕುತೂಹಲದ ಸತೀಶ ನಾವು ಓಡಿಬಂದದ್ದು ಯಾಕೆಂದು ಮತ್ತೊಮ್ಮೆ ಕೇಳಿದ. ಗಂಜಿ ತಿಂದ ಮೇಲೆ ಹೇಳ್ತೀನಿ, ಬನ್ನಿ ಈಗ ನಾವು ತಂದಿರುವುದು ಚರಂಡಿಯ ನೀರು ಎಂದು ಯಾರಿಗೂ ಹೇಳಬೇಡಿ ಈ ನೀರು ಚರಂಡಿಯಲ್ಲಿ ಹರಿದರೂ ಶುದ್ಧ ಜಲವೇ, ಮಣ್ಣಿನ ಬಣ್ಣ ಬಂದಿದೆ ಅಷ್ಟೇ ಎಂದು ಪಾಳು ಬಿದ್ದಿದ್ದ ರೈಲ್ವೇ ಸ್ಟೇಷನ್ನನ್ನು ಪ್ರವೇಶಿಸಿದೆವು.

ನಾವು ನಾಲ್ವರೂ ನೀರು ತರಲು ಹೋದ ಮೇಲೆ ಇವರುಗಳು ನಮ್ಮ ನಿರೀಕ್ಷೆಯಲ್ಲಿ ಕಾಯುತ್ತಲೇ ಇದ್ದರು. ಒಂದಿಬ್ಬರು ನಾವು ತೆರಳಿದ್ದ ದಿಕ್ಕಿನೆಡೆ ಅಂದರೆ ನಾವು ನಾಳೆ ಕ್ರಮಿಸಬೇಕಿದ್ದ ದಿಕ್ಕಿನೆಡೆ ಕೊಂಚ ದೂರ ಹೋಗಿ ಮುಂದಕ್ಕೆ ಹೋಗಲು ಧೈರ್ಯ ಸಾಲದೇ ವಾಪಾಸ್ ಬಂದಿದ್ದರಂತೆ. ನೀರು ಸಿಗುತ್ತಾ ಎಂದು ಮೂರ್ನಾಲ್ಕು ಜನ ಬೇರೆಡೆಯೂ ಪ್ರಯತ್ನಿಸಿ ಸೋತಿದ್ದರು.

ಪಾತ್ರೆಯೊಳಗೆ ಟಾರ್ಚಿನ ಬೆಳಕು ಬಿಡದೇ ಆ ನೀರನ್ನೇ ಕುದಿಸಿ, ಅಕ್ಕಿ, ಕಾಯಿತುರಿ ಹಾಕಿ, ಸ್ವಾದಿಷ್ಠ ಗಂಜಿ ಮಾಡಿ ಮನದಣಿಯೇ ಸೇವಿಸಿ ಮಲಗಿದೆವು. ಆ ದಿನದ ನಡಿಗೆ ಸುಮಾರು ಇಪ್ಪತ್ತು ಕಿಲೋ ಮೀಟರ್, ನಾವ್‌ನಾಲ್ವರದು ಏಳೆಂಟು ಕಿಲೋ ಮೀಟರ್ ಅಡಿಷನಲ್. ಆ ಸುಸ್ತಿಗೆ, ಬಿಸ್ಸಿ ಬಿಸ್ಸಿ ಗಂಜಿ ಅನ್ನಕ್ಕೆ ನಿದ್ರೆ ಒದ್ದುಕೊಂಡು ಬರುತಿತ್ತು. ಎಲ್ಲರೂ ಹರಟೆ ಹೊಡೆದು, ಹಾಸ್ಯ ಚಟಾಕಿ ಹಾರಿಸಿಕೊಂಡು, ನಾಳಿನ ಪಯಣದ ಚರ್ಚೆ ಮಾಡಿಕೊಂಡು ಮಗ್ನರಾದರು. ನನ್ನ ಎಡಬದಿಯೇ ಮಲಕ್ಕೊಂಡಿದ್ದ ಸತೀಶ ನಾವು ಓಡಿ ಬಂದದ್ದು ಯಾಕೆ ಎಂದು ಕಿವಿಯಲ್ಲುಸುರಿದ. ನಾನು ನೋಡಿದ್ದು, ಗ್ರಹಿಸಿದ್ದು, ಪ್ರತಿಕ್ರಿಯಿಸಿದ್ದು, ಕಾಲಿಗೆ ಬುದ್ಧಿ ಹೇಳಿದ್ದು, ಇವೆಲ್ಲಾ ಘಟಿಸಿದ್ದು ಕೇವಲ ಅರ್ಧ ಕ್ಷಣದಲ್ಲಿ ನಡೆದು ಹೋದ ಒಂದು ಫ್ಲಾಷ್. ಅಲ್ಲಿ ನಮ್ಮನ್ನು, ನಾವು ಗದ್ದಲ ಮಾಡಿಕೊಂಡು ಬರುತಿದ್ದುದನ್ನು, ನಾವು ಚೆಲ್ಲುತ್ತಿದ್ದ ಟಾರ್ಚಿನ ಬೆಳಕನ್ನು ಸದ್ದಿಲ್ಲದೇ ನೋಡುತ್ತಾ ಗಂಭೀರವಾಗಿ ನಿಂತಿದ್ದು ಆನೆ. ನಾನಿನ್ನೊಂದು ಹೆಜ್ಜೆ ಇಟ್ಟಿದ್ದರೂ ಆನೆಯ ಸೊಂಡಿಲಿಗೇ ಡಿಕ್ಕಿ ಹೊಡೆಯುತಿದ್ದೆ. ನಮ್ಮೆಲ್ಲರ ಹಳವಂಡಗಳನ್ನು ನೋಡಿಯೂ, ನಾವು ಓಟ ಕಿತ್ತಾಗ ನಮ್ಮ ಹಿಂದೆ ಬೆರಸಾಡಿಕೊಂಡು ಬಂದಂತೆಯೂ ಕಾಣಲಿಲ್ಲ, ಅದು ಕಣೋ ರಾಜ, ಗಜರಾಜ ಎಂದೆ.

(ಮುಂದುವರಿಯುವುದು)

Printed, Published and Owned by Manjunatha B.R. and Printed at PAPPAS PRINT HOUSE, BEHIND DISTRICT STADIUM, M.G.ROAD,VIDYANAGAR, HASSAN, KARNATAKA-573201 and published at No. 150, BANAVASE, SAKALESHPURA TALLUK, HASSAN DISTRICT, KARNATAKA-573201. Editor: MANJU BANAVASE. Ph: 8762954248